“ಹೌದು, ತುಂಬಾ ಅಪಶಕುನ...”

“ನೋಡಿ, ಆಗ್ಲೇ ಹೆಣದಿಂದ ದುರ್ಗಂಧ ಬರ್ತಾ ಇದೆ...”

ಇಬ್ಬರ ಆತಂಕ ಹೆಚ್ಚಿತು.ಅತ್ತು ಸುಸ್ತಾಗಿ ಸಮಗಾರ್ತಿಯರು ನಿರ್ಗಮಿಸಿದರು. ಎಲ್ಲೆಡೆಯೂ ಸ್ಮಶಾನ ಮೌನ!... ಊರು ಶಾಂತವಾಗಿತ್ತು. ಸಣ್ಣಗೆ ಮಳೆ ಹನಿ... ಗವ್ವೆನ್ನುವ ಕತ್ತಲು... ನಿಶ್ಯಬ್ದ ರಾತ್ರಿ... ನಿಧಾನಕ್ಕೆ ಪಸರಿಸಿಕೊಳ್ಳುತ್ತಿರುವ ಶವದ ದುರ್ಗಂಧ!... ಪಂಡಿತರು ಯೋಚಿಸಿ ಒಂದು ಉದ್ದವಾದ ಹಗ್ಗ ತೆಗೆದುಕೊಂಡರು. ಹೆಣವನ್ನು ಅಲ್ಲಿಂದ ಸಾಗಿಸಲೇಬೇಕಾಗಿತ್ತು.

ಹಗ್ಗದ ಒಂದು ತುದಿಯನ್ನು ನೇಣಿನ ಗಂಟು ಮಾಡಿ ಹೆಣದ ಕಾಲಿನೊಳಗೆ ತೂರಿಸಿದರು. ನಿಧಾನಕ್ಕೆ ಎಳೆದರು. ಅದು ಪಾದದ ಮೇಲೆ ಬಿಗಿಯಾಗಿ ಹಿಡಿದುಕೊಂಡಿತು. ಕತ್ತಲ ರಾತ್ರಿಯ ಜಿನುಗುವ ಮಳೆಯಲ್ಲಿ ಬರಿ ನೆಲದ ಮೇಲೆ ಸೆಟೆದ ಹೆಣವನ್ನು ಒಬ್ಬರೇ ಪ್ರಯಾಸ ಪಡುತ್ತಾ ಎಳೆದರು. ಅದು ಅಲ್ಲಲ್ಲಿಯ ಕಲ್ಲು ಮುಳ್ಳು ಕೆಸರಿನ ನೆಲವನ್ನು ಸವರುತ್ತಾ ಸಾಗಿತು. ಅಂಗಾತ ಸೆಟೆದ ಹೆಣವನ್ನು ಎಳೆದು ಊರ ಹೊರಗೆ ತಂದರು. ಮಳೆಯಲ್ಲಿಯೂ ಬೆವರುತ್ತಾ ತೇಗುತ್ತಾ ಭಾರದ ಹೆಣವನ್ನು ದರ ದರ ಎಳೆದ ಕೈ ನೋವು ಗಮನಿಸದೆ ಸತ್ತ ದನ ಕರುಗಳ ಕೊಂಪೆಗೆ ತಂದು ದೂಡಿದರು. ಆಕಾಶದ ಗುಡುಗು ಮಿಂಚು ಕತ್ತಲ ರಾತ್ರಿಯ ಸ್ಮಶಾನ ಮೌನದಲ್ಲಿ ದುಖಿ ಶವ ಸತ್ತ ಪ್ರಾಣಿಗಳ ಮಗ್ಗಲಿಗೆ ಸೇರಿಕೊಂಡಿತು.

ನೆಮ್ಮದಿಯ ಉಸಿರು ಬಿಟ್ಟು ಮನೆಗೆ ವಾಪಸ್ಸಾದರು. ಕೂಡಲೇ ಸ್ನಾನ ಮಾಡಿ ಪೂಜೆಗೆ ಕುಳಿತರು. ದುರ್ಗಾದೇವಿ ಪಾಠ ಪಠನ ಕೈಗೊಂಡರು. ಮನೆಯ ತುಂಬಾ ಗಂಗಾಜಲ ಚಿಮುಕಿಸಿದರು.

ಕೊಂಪೆಯಲ್ಲಿ ಸತ್ತ ದನಗಳ ಮಗ್ಗಲಿಗೆ ಸೇರಿದ ದುಖಿ ಶವಕ್ಕೆ ಹದ್ದು ನರಿ ನಾಯಿಗಳು ಸುತ್ತುವರೆದವು. ಇದು ಅವನ ಭಕ್ತಿ, ನಿಷ್ಠೆ ಮತ್ತು ಸೇವಾ ಭಾವದ ಜೀವ ಪರ್ಯಂತ ಸಮರ್ಪಣೆಗೆ ಸಿಕ್ಕ ಪುರಸ್ಕಾರವಾಗಿತ್ತು.

## ಮುನ್ಷಿ ಪ್ರೇಮಚಂದ (1880–1936)

ಭಾರತದ ಪ್ರಮುಖ ಲೇಖಕ ಪ್ರೇಮಚಂದ ಬನಾರಸ್ ಬಳಿಯ ಲಮಹಿ ಗ್ರಾಮದಲ್ಲಿ ಜನಿಸಿದರು. 1919ರಲ್ಲಿ ಇಂಗ್ಲಿಷ್, ಪಾರ್ಸಿ, ಇತಿಹಾಸ ವಿಷಯದಲ್ಲಿ ಬಿ.ಎ. ಮುಗಿಸಿದರು. 1910ರಲ್ಲಿ ಉರ್ದುವಿನಲ್ಲಿ ಬರೆದ ಕತೆಗಳ ಮೊದಲ ಸಂಕಲನ ‘ಸೋಜೆ ವತನ್’ ಪ್ರಕಟಿಸಿದರು. ಅವರ ಮೂಲ ಹೆಸರು ಧನಪತ್ ರಾಯ ಶ್ರೀವಾಸ್ತವ. ಉರ್ದು ಲೇಖಕ, ಸಂಪಾದಕ ದಯಾನಾರಾಯಣ ನಿಗಮ ಸೂಚಿಸಿದ ‘ಪ್ರೇಮಚಂದ’ ಹೆಸರಿನಲ್ಲಿಯೇ ಸಾಹಿತ್ಯ ರಚನೆ ಮಾಡಿದವರು.

### ‘ಕ್ಷಿತಿಜ್ ಬೀದರ್’

‘ಕ್ಷಿತಿಜ್ ಬೀದರ್’ ಎಂಬ ಕಾವ್ಯಮಾನದಲ್ಲಿ ಬರೆಯುವ ಬಸವರಾಜ್ ಮಠಪತಿ, ಮೂಲತಃ ಬೀದರ್ ಜಿಲ್ಲೆಯವರು. ಈವರೆಗೆ 31 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅದರಲ್ಲಿ 9 ಕಥಾಸಂಕಲನ 14 ಕಾದಂಬರಿಗಳು ಸೇರಿವೆ. ರೇಷ್ಮೆ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಪ್ರಸ್ತುತ ತುಮಕೂರಿನಲ್ಲಿ ನಿವೃತ್ತಿ ಜೀವನ ನಡೆಸುತ್ತಿದ್ದಾರೆ.